ಆ ಘಟನೆ ನಡೆದಾಗ ಮಹಾದೇವ ಕೋಲಾರದಲ್ಲಿದ್ದರು. ಹಿಂದುಳಿದ ಜಾತಿಯ ಹೆಣ್ಣುಮಗಳೊಬ್ಬಳ ಮೇಲೆ ಮೇಲ್ಜಾತಿಯ ವ್ಯಕ್ತಿಯೊಬ್ಬ ನಡೆಸಿದ ಅತ್ಯಾಚಾರವನ್ನು ಖಂಡಿಸಿ, 'ಜಾತಿ ಎಂಬುದು ವಿಷದ ಮರ. ಅದನ್ನು ಬೇರು ಸಮೇತ ಕಿತ್ತೊಗೆಯದೆ ವಿಧಿ ಇಲ್ಲ' ಎಂಬ ಘೋಷ ವಾಕ್ಯದೊಂದಿಗೆ ಹೋರಾಟದಲ್ಲಿ ತೊಡಗಿದ್ದರು. ಆ ಹೋರಾಟಕ್ಕೆ ಮಹಾದೇವರಿಗೆ ಸ್ಥಳೀಯ ಜನರ ಬೆಂಬಲವೂ ಸೇರಿದಂತೆ, ನಾಡಿನಾದ್ಯಂತ ಜನರ ಬೆಂಬಲವು ದೊರಕಿತ್ತು. 'ಜಾತಿ ಎಂಬುದು ವಿಷದ ಮರ' ಎಂಬ ಹೆಡ್‌ಲೈನ್‌ನಲ್ಲಿ ಪ್ರತಿದಿನ ಒಂದಲ್ಲ ಒಂದು ದೃಷ್ಟಿಕೋನದಲ್ಲಿ ಟಿ.ವಿ ಮತ್ತು ದಿನಪತ್ರಿಕೆಗಳು ಸುದ್ದಿ ಪ್ರಕಟಿಸಿದ್ದವು. ಹೀಗೆ ಮಹಾದೇವರ ಹೆಸರು ನಾಡಿನಲ್ಲಿ ಪ್ರಚಲಿತದಲ್ಲಿತ್ತು.

ತನ್ನನ್ನು ಸಂಪರ್ಕಿಸಿದ ಪಕ್ಷಕ್ಕೆ ಸರಿಯಾದ ಎಂ.ಎಲ್.ಎ ಅಭ್ಯರ್ಥಿ ಇಲ್ಲದಿರುವ ವಿಷಯ ಮಹಾದೇವರಿಗೆ ಗೊತ್ತಿಲ್ಲದ ವಿಷಯವೇನು ಆಗಿರಲಿಲ್ಲ ಮತ್ತು ಆ ಪಕ್ಷದ ಅಭ್ಯರ್ಥಿಯಾಗಿ ಗೆಲ್ಲಲೇಬೇಕಾದ ತುರ್ತಿಗೆ ನನ್ನನ್ನು ಸಂಪರ್ಕಿಸುತ್ತಿದ್ದಾರೆ ಎಂಬುದು ಕೂಡ ಮಹಾದೇವರಿಗೆ ಗೊತ್ತಿತ್ತು ಹಾಗೂ ಅವರಿಗೆ ಬೇರೆ ಯಾವ ಆಯ್ಕೆಗಳು ಇಲ್ಲ ಎಂಬುದು ಕೂಡ ಗೊತ್ತಿತ್ತು. ಹಾಗಾಗಿ ಆ ಪಕ್ಷದ ಟಿಕೆಟ್‌ಗಾಗಿ ಟಿಕೆಟ್ ಆಕಾಂಕ್ಷಿ ಪಾರ್ಟಿ ಫಂಡ್ ಕೊಡುವ ಆ ಪಕ್ಷದ ಒಪ್ಪಂದವನ್ನು ಕಡ್ಡಿ ತುಂಡಾದಂತೆ ಮಹಾದೇವ ನಿರಾಕರಿಸಿದರು. ಆ ವಿಷಯವಾಗಿ ಒಂದು ದಿನ ಕಾಯ್ದು ನೋಡುವ ತಂತ್ರ ಉಪಯೋಗಿಸಿ ಕಾಯ್ದ ಆ ಪಕ್ಷದ ಹೈಕಮಾಂಡ್, ಮರುದಿನ ವಿಧಿ ಇಲ್ಲದೆ ಮಹಾದೇವರ ಒಪ್ಪಿಗೆಯ ಮೇರೆಗೆ ಪ್ರೆಸ್ ಮೀಟ್ ಕರೆದು, ಮಹಾದೇವ ನಮ್ಮ ಪಕ್ಷದ ಎಂ.ಎಲ್.ಎ ಆಕಾಂಕ್ಷಿ ಅಭ್ಯರ್ಥಿ ಎಂದು ಘೋಷಿಸಿದರು.

ಎದುರಾಳಿ ಪಕ್ಷಗಳ ಎಂ.ಎಲ್.ಎ ಆಕಾಂಕ್ಷಿ ಅಭ್ಯರ್ಥಿಗಳ ಸಂಪೂರ್ಣ ವೀಕ್ನೆಸ್‌ಗಳನ್ನು ತಿಳಿದಿದ್ದ ಮಹಾದೇವರವರ ಎದುರು ವಿರುದ್ಧ ಪಕ್ಷದವರ ಬೇಳೆಕಾಳುಗಳೇನೂ ಬೇಯದೆ, ಆ ಎಲೆಕ್ಷನ್‌ನಲ್ಲಿ ಮಹಾದೇವರವರು ಎಪ್ಪತ್ತು ಸಾವಿರ ಓಟುಗಳ ಅಂತರದಲ್ಲಿ ಅದ್ದೂರಿಯಾಗಿ ಗೆದ್ದರು.

ತಮ್ಮನ್ನು ಗೆಲ್ಲಿಸಿದ ಆ ತಾಲ್ಲೂಕಿನ ಜನತೆಯ ಆಗಾಧ ಪ್ರೀತಿಯ ಕಂಡು ಮಂತ್ರ ಮುಗ್ಧರಾದ ಮಹಾದೇವರು, ಅವರ ಋಣ ತೀರಿಸಿ ಕೃತಜ್ಞತೆಯನ್ನು ಅರ್ಪಿಸುವ ಸಲುವಾಗಿ, ತಾಲ್ಲೂಕಿನ ಅಭಿವೃದ್ಧಿಗೆ ಸರ್ಕಾರದಿಂದ ದೊರೆಯುವ ಎಲ್ಲ ಯೋಜನೆಗಳ ಕಡೆ ಗಮನ ಕೊಟ್ಟರು ಮತ್ತು ಆರ್ಥಿಕತೆಯಿಂದ

